5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ 01/2018

ಪಿಡಬ್ಲೂ 09
ಸಿಡಬ್ಲೂ 11

| | | |
|---|---|---|
| ಸಾಕ್ಷಿ ಹೆಸರು | - | ಷಣ್ಮುಖಪ್ಪ |
| ತಂದೆ ಹೆಸರು | - | ಬಸವರಾಜಪ್ಪ ಗೌಡ |
| ವಯಸ್ಸು | - | 32 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಶಿವಪುರ ಗ್ರಾಮ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ 30-07-2018.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಚಾಸಃ1 ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಪೋಲಿಸರು ಮಹಜರ್ ಮಾಡಿರುವ ವಿಷಯ ನನಗೆ ಗೊತ್ತಿಲ್ಲ. ಆದರೆ ಅವರು ಸಹಿ ಮಾಡಬೇಕು ಎಂದು ಹೇಳಿದ್ದರಿಂದ ನಾನು ಸಹಿ ಮಾತ್ರ ಮಾಡಿದ್ದೇನೆ. ನನ್ನ ಮುಂದೆ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈಗ ನನಗೆ ತೋರಿಸಿದ ನಿಪಿ-3 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನನ್ನ ಸಹಿಯನ್ನು ನಿಪಿ-3 ಬ ಎಂದು ಗುರುತಿಸಲಾಯಿತು. ಕಳೆದ ಒಂದು ವರ್ಷದ ಹಿಂದೆ ನಮ್ಮ ಗ್ರಾಮದಿಂದನಾನು ಶಿರಾಳಕೊಪ್ಪಕ್ಕೆ ಹೋಗುತ್ತಿದ್ದಾಗ ಚತ್ರದ ಹಳ್ಳಿ ಬಳಿ ಪೋಲಿಸರು ನನಗೆ ನಿಪಿ-3 ರಲ್ಲಿ ಸಹಿ ಮಾಡುವಂತೆ ಕೋರಿದ್ದು ನಾನು ಸಹಿ ಮಾತ್ರ ಮಾಡಿರುತ್ತೇನೆ ನಿಪಿ-3 ನ್ನು ಪೋಲಿಸರು ಯಾವ ಉದ್ದೇಶಕ್ಕೆ ನನ್ನ ಸಹಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ಪರಿಚಯವಿರುವುದರಿಂದ ನನಗೆ ಸಹಿ ಮಾಡಲು ಕೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ನಿಪಿ-3 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ಮು.ಮಾ. 2 ರಿಂದ 13 ನ್ನು ನಾನು ಇದೇ ಮೊದಲ ಬಾರಿಗೆ

ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ನಿಪಿ-**3** ಗೆ ಸಹಿ ಮಾಡುವಾಗ ಮು.ಮಾ. **2** ರಿಂದ **13** ನನ್ನ ಮುಂದೆ ಇರಲಿಲ್ಲ. ನಿಪಿ-**5** ಫೋಟೋದಲ್ಲಿ ನಾನು ಕಂಡು ಬರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ದಿಃ 02-03-2016 ರಂದು ಆರೋಪಿತರು ಚಾಸಃ 1 ಮತ್ತು ಸಿಬ್ಬಂದಿಗಳಿಗೆ ಹಲ್ಲೆ ನಡೆಸಿದ್ದ ಹಿನ್ನೆಲೆಯಲ್ಲಿ ಚಾಸಃ 27 ಘಟನಾ ಸ್ಥಳಕ್ಕೆ ಬಂದಾಗ ಚಾಸಃ1 ನನ್ನ ಮತ್ತು ಚಾಸಃ 12 ಮತ್ತು 13 ರವರ ಸಮಕ್ಷಮ ಸ್ಥಳ ತೋರಿಸಿದ ಮೇರೆಗೆ ಸ್ಥಳ ಪರಿಶೀಲನೆ ಮಾಡಿ ಸ್ಥಳದಲ್ಲಿ ಬಿದ್ದಿದ್ದ ಕೃತ್ಯಕ್ಕೆ ಸಂಬಂಧಿಸಿದ ಮು.ಮಾ. **2** ರಿಂದ **13** ನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ **9.00** ರಿಂದ **10.15** ರವರೆಗೆ ನಿಪಿ-**3** ಪಂಚನಾಮೆ ತಯಾರಿಸಿದರು ಎಂದರೆ ಸರಿಯಲ್ಲ. ನಿಪಿ-**5** ರಂತೆ ಸ್ಥಳದಲ್ಲಿ ಫೋಟೋ ತೆಗೆದರು ಎಂದರೆ ಸರಿಯಲ್ಲ. ಫೋಟೋವನ್ನು ಕೆರೆಯಲ್ಲಿ ತೆಗೆದರು. ನಿಪಿ-**5** ರಲ್ಲಿ ಮು.ಮಾ.**2** ರಿಂದ **13** ವಸ್ತುಗಳನು ಕಾಣಿಸುತ್ತಿವೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-**3** ಪಂಚನಾಮೆಯಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದ್ದರೂ ಸಹ ಅದಕ್ಕೆ ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಆರೋಪಿತರು ನಮ್ಮ ಗ್ರಾಮದವರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ. ಕೆಕೆಎಸ್. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **10**
ಸಿಡಬ್ಲೂ **12**

| | | |
|---|---|---|
| ಸಾಕ್ಷಿ ಹೆಸರು | - | ನಿಂಗಪ್ಪ |
| ತಂದೆ ಹೆಸರು | - | ಹನುಮಪ್ಪ |
| ವಯಸ್ಸು | - | **55** ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸುತ್ ಕೋಟೆ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **30-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಃ **11** ಮತ್ತು **13** ರವರ ಪರಿಚಯವಿದೆ. ಚಾಸಃ**1** ನನಗೆ ಗೊತ್ತಿಲ್ಲ. ನನಗೆ ಆರೋಪಿತರು ಗೊತ್ತಿಲ್ಲ. ಸುಮಾರು ಒಂದುವರೆ ವರ್ಷದ ಹಿಂದೆ ಚತ್ರದ ಹಳ್ಳಿ ಕೆರೆ ಬಳಿ ನಿಪಿ-**3** ಮಹಜರ್ ಗೆ ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ನಿಪಿ-**3** ಕ ಎಂದು ಗುರುತಿಸಲಾಯಿತು. ನಿಪಿ-**3** ಮಹಜರ್ ಕಾಲಕ್ಕೆ ಪೋಲಿಸರು ನಿಪಿ-**5** ರಂತೆ ಒಂದು ಪೋಟೋ ತೆಗೆದರು. ನಿಪಿ-**5** ರಲ್ಲಿ ನಾನು ಕಂಡು ಬರುತ್ತೇನೆ. ಪೋಲಿಸರು ನಾವು ಮಹಜರ್ ಮಾಡಿದ್ದೇವೆ ಅದಕ್ಕೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾತ್ರ ಮಾಡಿರುತ್ತೇನೆ ಪೋಲಿಸರು ಯಾವ ವಿಷಯಕ್ಕೆ ಸಂಬಂಧಿಸಿದಂತೆ ಮಹಜರ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಿಪಿ-**3** ನ್ನು ಪೋಲಿಸರು ಯಾವ ಉದ್ದೇಶಕ್ಕೆ ನನ್ನ ಸಹಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈಗ ನನಗೆ ತೋರಿಸಿದ ಮು.ಮಾ. **2** ರಿಂದ **13** ನಾನು ಸಹಿ ಮಾಡಿದ ಸಂದರ್ಭದಲ್ಲಿ ಎಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ತನಿಖಾಧಿಕಾರಿಗೆ ಕೃತ್ಯ ನಡೆದ

ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿಃ 02-03-2016 ರಂದು ಆರೋಪಿತರು ಚಾಸಃ 1 ಮತ್ತು ಸಿಬ್ಬಂದಿಗಳಿಗೆ ಹಲ್ಲೆ ನಡೆಸಿದ್ದ ಹಿನ್ನೆಲೆಯಲ್ಲಿ ಚಾಸಃ 27 ಘಟನಾ ಸ್ಥಳಕ್ಕೆ ಬಂದಾಗ ಚಾಸಃ1 ನನ್ನ ಮತ್ತು ಚಾಸಃ 11 ಮತ್ತು 13 ರವರ ಸಮಕ್ಷಮ ಸ್ಥಳ ತೋರಿಸಿದ ಮೇರೆಗೆ ಸ್ಥಳ ಪರಿಶೀಲನೆ ಮಾಡಿ ಸ್ಥಳದಲ್ಲಿ ಬಿದ್ದಿದ್ದ ಕೃತ್ಯಕ್ಕೆ ಸಂಬಂಧಿಸಿದ ಮು.ಮಾ. 2 ರಿಂದ 13 ನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 9.00 ರಿಂದ 10.15 ರವರೆಗೆ ನಿಪಿ-3 ಪಂಚನಾಮೆ ತಯಾರಿಸಿದರು ಎಂದರೆ ಸರಿಯಲ್ಲ. ನಿಪಿ-5 ರಂತೆ ಸ್ಥಳದಲ್ಲಿ ಪೋಟೋ ತೆಗೆದರು ಎಂದರೆ ಸರಿಯಲ್ಲ. ಪೋಟೋವನ್ನು ಕೆರೆಯಲ್ಲಿ ತೆಗೆದರು. ನಿಪಿ-5 ರಲ್ಲಿ ದೊಣ್ಣೆಗಳು ಮತುತ ಕಲ್ಲುಗಳು ಕಾಣಿಸುತ್ತಿವೆ ಎಂದರೆ ಸರಿ. ಆದರೆ ಅವುಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ನಿಪಿ-3 ಪಂಚನಾಮೆಯಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದ್ದರೂ ಸಹ ಅದಕ್ಕೆ ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಆರೋಪಿತರು ನಮ್ಮ ಪರಿಚಯದರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ರಿಂದ 4 ನೇ ಆರೋಪಿ ಪರ ಶ್ರೀ. ಕೆಕೆಎಸ್. ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

**5** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **11**
ಸಿಡಬ್ಲೂ **13**

| | | |
|---|---|---|
| ಸಾಕ್ಷಿ ಹೆಸರು | - | ರಾಮಚಂದ್ರಪ್ಪ |
| ತಂದೆ ಹೆಸರು | - | ಲೋಕಪ್ಪ |
| ವಯಸ್ಸು | - | **39** ವರ್ಷ |
| ಉದ್ಯೋಗ | - | ಟೈಲರ್ |
| ವಿಳಾಸಃ | - | ಸುತ್ ಕೋಟೆ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **30-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಃ **11** ಮತ್ತು **12** ರವರ ಪರಿಚಯವಿದೆ. ಚಾಸಃ**1** ನನಗೆ ಗೊತ್ತಿಲ್ಲ. ನನಗೆ ಆರೋಪಿತರು ಗೊತ್ತಿಲ್ಲ. ಸುಮಾರು ಎರಡು ವರ್ಷದ ಹಿಂದೆ ಚತ್ರದ ಹಳ್ಳಿ ಕೆರೆ ಬಳಿ ನಿಪಿ-**3** ಮಹಜರ್ ಗೆ ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ನಿಪಿ-**3** ಡ ಎಂದು ಗುರುತಿಸಲಾಯಿತು. ನಿಪಿ-**3** ಮಹಜರ್ ಕಾಲಕ್ಕೆ ಪೋಲಿಸರು ನಿಪಿ-**5** ರಂತೆ ಒಂದು ಪೋಟೋ ತೆಗೆದರು. ನಿಪಿ-**5** ರಲ್ಲಿ ನಾನು ಕಂಡು ಬರುತ್ತೇನೆ. ಪೋಲಿಸರು ನಾವು ಮಹಜರ್ ಮಾಡಿದ್ದೇವೆ ಅದಕ್ಕೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾತ್ರ ಮಾಡಿರುತ್ತೇನೆ ಪೋಲಿಸರು ಯಾವ ವಿಷಯಕ್ಕೆ ಸಂಬಂಧಿಸಿದಂತೆ ಮಹಜರ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಿಪಿ-**3** ನ್ನು ಪೋಲಿಸರು ಯಾವ ಉದ್ದೇಶಕ್ಕೆ ನನ್ನ ಸಹಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈಗ ನನಗೆ ತೋರಿಸಿದ ಮು.ಮಾ. **2** ರಿಂದ **13** ನಾನು ಸಹಿ ಮಾಡಿದ ಸಂದರ್ಭದಲ್ಲಿ ಎಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ತನಿಖಾಧಿಕಾರಿಗೆ ಕೃತ್ಯ ನಡೆದ

ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ. ನಿಪಿ–3 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿಃ 02-03-2016 ರಂದು ಆರೋಪಿತರು ಚಾಸಃ 1 ಮತ್ತು ಸಿಬ್ಬಂದಿಗಳಿಗೆ ಹಲ್ಲೆ ನಡೆಸಿದ್ದ ಹಿನ್ನೆಲೆಯಲ್ಲಿ ಚಾಸಃ 27 ಘಟನಾ ಸ್ಥಳಕ್ಕೆ ಬಂದಾಗ ಚಾಸಃ1 ನನ್ನ ಮತ್ತು ಚಾಸಃ 11 ಮತ್ತು 12 ರವರ ಸಮಕ್ಷಮ ಸ್ಥಳ ತೋರಿಸಿದ ಮೇರೆಗೆ ಸ್ಥಳ ಪರಿಶೀಲನೆ ಮಾಡಿ ಸ್ಥಳದಲ್ಲಿ ಬಿದ್ದಿದ್ದ ಕೃತ್ಯಕ್ಕೆ ಸಂಬಂಧಿಸಿದ ಮು.ಮಾ. 2 ರಿಂದ 13 ನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 9.00 ರಿಂದ 10.15 ರವರೆಗೆ ನಿಪಿ–3 ಪಂಚನಾಮೆ ತಯಾರಿಸಿದರು ಎಂದರೆ ಸರಿಯಲ್ಲ. ನಿಪಿ–5 ರಂತೆ ಸ್ಥಳದಲ್ಲಿ ಪೋಟೋ ತೆಗೆದರು ಎಂದರೆ ಸರಿಯಲ್ಲ. ಪೋಟೋವನ್ನು ಕೆರೆಯಲ್ಲಿ ತೆಗೆದರು. ನಿಪಿ–5 ರಲ್ಲಿ ಇರುವ ದೊಣ್ಣೆಗಳು ಮತ್ತು ಕಲ್ಲುಗಳು ಕಾಣಿಸುತ್ತಿವೆ ಎಂದರೆ ನಾನು ಆ ಸಮಯದಲ್ಲಿ ಅವುಗಳನ್ನು ಗಮನಿಸಿಲ್ಲ.

ನಿಪಿ–3 ಪಂಚನಾಮೆಯಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದ್ದರೂ ಸಹ ಅದಕ್ಕೆ ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಆರೋಪಿತರು ನಮ್ಮ ಪರಿಚಯದರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ರಿಂದ 4 ನೇ ಆರೋಪಿ ಪರ ಶ್ರೀ. ಕೆಕೆಎಸ್. ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

**5** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **12**
ಸಿಡಬ್ಲೂ **15**

| | | |
|---|---|---|
| ಸಾಕ್ಷಿ ಹೆಸರು | - | ವಿಜೇಂದ್ರಪ್ಪ |
| ತಂದೆ ಹೆಸರು | - | ಬಸವಣ್ಯಪ್ಪ |
| ವಯಸ್ಸು | - | **53** ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಚಿಟ್ಟೂರು ಗ್ರಾಮ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **30-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಈಗ ತೋರಿಸಿದ ಮು.ಮಾ.**1** ಪಿಸ್ತೂಲ್ ನ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸುಮಾರು ಎರಡು ವರ್ಷದ ಹಿಂದೆ ಸೊರಬ ಪೋಲಿಸ್ ಠಾಣೆಯಲ್ಲಿ ನನಗೆ ಚಾಸಃ **27** ಸಿಪಿಐ.ರವರು ಚಾಸಃ **1** ರವರನ್ನು ತೋರಿಸಿ ಅವರು ಅಜ್ಜಂಪುರ ಪಿಎಸ್ಐ. ಎಂದು ಹೇಳಿರುತ್ತಾರೆ. ಅವರು ನನ್ನ ಸಮಕ್ಷಮ ಈಗ ನನಗೆ ತೋರಿಸಿದ ಮು.ಮಾ.**1** ಪಿಸ್ತೂಲ್ ನಿಂದ ಗುಂಡು ಹಾರಿಸಲಾಗಿದೆ ಎಂದು ಹೇಳಿ ನನಗೆ ಮು.ಮಾ.**1** ನ್ನು ತೋರಿಸಿರುತ್ತಾರೆ. ನಂತರ ಮು.ಮಾ.**1** ನ್ನು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ಅದಕ್ಕೆ ಮೊಹರು ಹಾಕಿ, ಅದಕ್ಕೆ ಒಂದು ಚೀಟಿ ಅಂಟಿಸಿ ಅದರ ಮೇಲೆ ನನ್ನ ಸಹಿ ಮತ್ತು ಚಾಸಃ **14** ರವರ ಸಹಿ ಪಡೆದುಕೊಂಡಿರುತ್ತಾರೆ.

ಈಗ ನನಗೆ ತೋರಿಸಿದ ನಿಪಿ-**2** ರಲ್ಲಿನ ಸಹಿ ನನ್ನದೇ ಆಗಿರುತ್ತದೆ. ನಿಪಿ-**2** ಅಮಾನತ್ತು ಮಹಜರ್ ಅಡಿ ಮು.ಮಾ.**1** ನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ಬರವಣಿಗೆ ಆಗಿರುತ್ತದೆ. ನಿಪಿ-**2** ಬ ನನ್ನ ಸಹಿ. ಪೋಲಿಸರು ನಿಪಿ-**2** ಗೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

<u>ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ. ಕೆಕೆಎಸ್. ವಕೀಲರಿಂದಃ</u>

ಆ ದಿನ ಬೆಳಿಗ್ಗೆ ನಾನು ಸೊರಬ ಪೋಲಿಸ್ ಠಾಣೆಗೆ ಹೋಗಿದ್ದೆ. ನಾನು ಠಾಣೆಗೆ ಆ ದಿನ ನನ್ನ ದಾಯಾದಿ ಜಮೀನಿನ ವ್ಯಾಜ್ಯದ ಬಗ್ಗೆ ಹೋಗಿದ್ದು, ಆ ದಿನ ಪೋಲಿಸರು ನನ್ನನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರೆಸಿರಲಿಲ್ಲ. ನನಗೆ ಚಾಸಃ1 ರವರನ್ನು ಚಾಸಃ 27 ರವರು ತೋರಿಸಿದಾಗ ಸಮಯ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ಬೆಳಿಗ್ಗೆ 8.45 – 9-00 ಗಂಟೆ ಇರಬಹುದು ಎಂದು ನುಡಿದಿದ್ದಾರೆ. ಈಗ ನನಗೆ ತೋರಿಸಿದ ನಿಪಿ-2 ರಲ್ಲಿ ಏನು ಬರೆದಿದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಅದೇ ರೀತಿ ಮು.ಮಾ.1 ರ ವಿವರಗಳು ನನಗೆ ಗೊತ್ತಿಲ್ಲ. ಆ ದಿನ ಚಾಸಃ 14 ರವರು ಸಹ ನನ್ನ ಜೊತೆ ಆ ದಿನ ನಮ್ಮ ವ್ಯಾಜ್ಯಕ್ಕೆ ಸಂಬಂಧಪಟ್ಟಂತೆ ಬಂದಿದ್ದರು. ಬಿಳಿಬಟ್ಟೆಯನ್ನು ಆ ಸಮಯದಲ್ಲಿ ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ. ಚಾಸಃ 1 ಮತ್ತು ಚಾಸಃ 27 ಮಾತ್ರ ಆ ಸಮಯದಲ್ಲಿದ್ದರು.

ನಿಪಿ-2 ರ ಚಕ್ಕುಬಂದಿ ನನಗೆ ಗೊತ್ತಿಲ್ಲ. ಅದು ಪೋಲಿಸ್ ಠಾಣೆಯ ಒಳಗೆ ತಯಾರಿಸಲಾಗಿತ್ತು. ಮು.ಮಾ.1 ಕಪ್ಪು ಬಣ್ಣ ದಾಗಿತ್ತು. ಮು.ಮಾ.1 ರ ಬಣ್ಣ ಮಾತ್ರ ನನಗೆ ಜ್ಞಾಪಕ ವಿದ್ದು ಅದರ ಮೇಲೆ ಗುರುತಿಸುವಂತೆ ವಿಶೇಷ ಗುರುತನ್ನು ನಾನು ಗಮನಿಸಿರುವುದಿಲ್ಲ. ನಾನು ನನ್ನ ಜಮೀನು ವಿಚಾರಕ್ಕೆ ಪೋಲಿಸ್ ಠಾಣೆಗೆ ಹೋಗಿದ್ದ ಸಮಯದಲ್ಲಿ ಪೋಲಿಸರು ನಿಪಿ-2 ಮತ್ತು ಮು.ಮಾ.1 ರ ಮೇಲೆ ನನ್ನ ಸಹಿಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನಿಪಿ-2 ಗೆ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

ಮು.ಮಾ.1 ನ್ನು ಚಾಸಃ 27 ರವರು ನನ್ನ ಸಮಕ್ಷಮ ಸೀಲು ಮಾಡಿರುತ್ತಾರೆ. ಸಾಕ್ಷಿ ಪುನಃ ಹೇಳುತಾತರೆ ಮು.ಮಾ.1 ನ್ನು ಸೀಲು ಮಾಡಿದರು ಯಾರು ಎಂದು ನಾನು ನೋಡಿರುವುದಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ**
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **13**
ಸಿಡಬ್ಲೂ **16**

| | | |
|---|---|---|
| ಸಾಕ್ಷಿ ಹೆಸರು | - | ರಾಜಶೇಖರ |
| ತಂದೆ ಹೆಸರು | - | ವಸಂತಪ್ಪ |
| ವಯಸ್ಸು | - | **42** ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸುತ್ ಕೋಟೆ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **30-07-2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಃ **17** ರವರ ಪರಿಚಯವಿದೆ. ಆತ ನಮ್ಮ ಗ್ರಾಮದವನೇ ಆಗಿರುತ್ತಾರೆ. ನನಗೆ ಆರೋಪಿ ನಂಃ **3** ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಃ **3** ರಿಂದ ಮು.ಮಾ.**14** ನ್ನು ವಶಪಡಿಸಿಕೊಂಡಿದ್ದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಪೋಲಿಸರು ಫೋಟೋ ತೆಗೆದಿದ್ದು, ನನಗೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಆ ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲಾತಿಯು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ**-18** ಎಂದು ಗುರುತಿಸಲಾಯಿತು. ನಿಪಿ**-18** ಅ ನನ್ನ ಸಹಿ. ಸದರಿ ಸಹಿಯನ್ನು ನಾನು ಚತ್ರದ ಹಳ್ಳಿ ಕೆರೆಯ ಬಳಿ ಹಾಕಿರುತ್ತೇನೆ. ಆ ಸಮಯದಲ್ಲಿ **3** ನೇ ಆರೋಪಿ ಸುಭಾಷ್ ಈತನನ್ನು ನೋಡಿರುವುದಿಲ್ಲ. ಮು.ಮಾ.**14** ನ್ನು ಆ ಸಮಯದಲ್ಲಿ ನಾನು ನೋಡಿರುವುದಿಲ್ಲ. ನಿಪಿ**-18** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ದಿಃ 07-03-2016 ರಂದು ನಾನು ಮತ್ತು ಚಾಸಃ 17 ರವರು ಸೊರಬ ಸಿಪಿದಿ. ಕಛೇರಿಗೆ ಹೋಗಿದ್ದೆವು, ಆ ಸಮಯದಲ್ಲಿ ಆರೋಪಿ ನಂಃ 3 ಮು.ಮಾ.14 ನ್ನು ಚತ್ರದಹಳ್ಳಿಯ ಕೆರೆಯ ಬಳಿ ಇಟ್ಟಿದ್ದೇನೆ ಎಂದು ತಿಳಿಸಿದ್ದರ ಮೇರೆಗೆ ನಾನು ಮತ್ತು ಚಾಸಃ 27 ಮತ್ತು 17 ರ ಸಮಕ್ಷಮ ಛತ್ರದ ಹಳ್ಳಿಯ ಕೆರೆ ಬಳಿ ಹೋಗಿದ್ದು ನಮ್ಮ ಸಮಕ್ಷಮ ಆರೋಪಿ ನಂಃ 3 ಕಾಡು ಜಾತಿಯ ಬೆಂಡಿನ ಪೊದೆಯಲ್ಲಿ ಹುಡುಕಿ ಮು.ಮಾ.14 ತೆಗೆದು ಹಾಜರುಪಡಿಸಿದ್ದನ್ನು ನಮ್ಮ ಸಮಕ್ಷಮ ನಿಪಿ-18 ರಂತೆ ಅಮಾನತ್ತು ಪಂಚನಾಮೆ ಮಾಡಿ ಮು.ಮಾ.14 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ನಿಪಿ-18 ನ್ನು ಓದಿ ಅದಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡು ಸದರಿ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-18 ಪಂಚನಾಮೆಯಲ್ಲಿ ಬರೆದಿದ್ದ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ. ಕೆಕೆಎಸ್. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

**5** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ 01/2018

ಪಿಡಬ್ಲೂ 14
ಸಿಡಬ್ಲೂ 17

| | | |
|---|---|---|
| ಸಾಕ್ಷಿ ಹೆಸರು | - | ರಾಜಪ್ಪ |
| ತಂದೆ ಹೆಸರು | - | ಹನುಮಂತಪ್ಪ |
| ವಯಸ್ಸು | - | 60 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸುತ್ ಕೋಟೆ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ 30-07-2018.
ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಃ 16 ರವರ ಪರಿಚಯವಿದೆ. ಆತ ನಮ್ಮ ಗ್ರಾಮದವನೇ ಆಗಿರುತ್ತಾರೆ. ನನಗೆ ಆರೋಪಿ ನಂಃ 3 ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಃ 3 ರಿಂದ ಮು.ಮಾ.14 ನ್ನು ವಶಪಡಿಸಿಕೊಂಡಿದ್ದು ನನಗೆ ಗೊತ್ತಿಲ್ಲ. ಸುಮಾರು ಎರಡು ವರ್ಷದ ಕೆಳಗೆ ಮು.ಮಾ.14 ನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಪೋಲಿಸರು ಪೋಟೋ ತೆಗೆದಿದ್ದು, ನನಗೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಆ ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲಾತಿಯು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-18 ಎಂದು ಗುರುತಿಸಲಾಯಿತು. ನಿಪಿ-18 ಬ ನನ್ನ ಸಹಿ. ಸದರಿ ಸಹಿಯನ್ನು ನಾನು ಚತ್ರದ ಹಳ್ಳಿ ಕೆರೆಯ ಬಳಿ ಹಾಕಿರುತ್ತೇನೆ ಆ ಸಮಯದಲ್ಲಿ 3 ನೇ ಆರೋಪಿ ಸುಭಾಷ್ ಈತನನ್ನು ನೋಡಿರುವುದಿಲ್ಲ. ಮು.ಮಾ.14 ನ್ನು ಆ ಸಮಯದಲ್ಲಿ ನಾನು ನೋಡಿರುವುದಿಲ್ಲ. ನಿಪಿ-18 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ದಿಃ 07-03-2016 ರಂದು ನಾನು ಮತ್ತು ಚಾಸಃ 16 ರವರು ಸೊರಬ ಸಿಪಿಐ. ಕಛೇರಿಗೆ ಹೋಗಿದ್ದೆವು, ಆ ಸಮಯದಲ್ಲಿ ಆರೋಪಿ ನಂಃ 3 ಮು.ಮಾ.14 ನ್ನು ಚತ್ರದಹಳ್ಳಿಯ ಕೆರೆಯ ಬಳಿ ಇಟ್ಟಿದ್ದೇನೆ ಎಂದು ತಿಳಿಸಿದ್ದರ ಮೇರೆಗೆ ನಾನು ಮತ್ತು ಚಾಸಃ 27 ಮತ್ತು 17 ರ ಸಮಕ್ಷಮ ಛತ್ರದ ಹಳ್ಳಿಯ ಕೆರೆ ಬಳಿ ಹೋಗಿದ್ದು ನಮ್ಮ ಸಮಕ್ಷಮ ಆರೋಪಿ ನಂಃ 3 ಕಾಡು ಜಾತಿಯ ಬೆಂಡಿನ ಪೊದೆಯಲ್ಲಿ ಹುಡುಕಿ ಮು.ಮಾ.14 ತೆಗೆದು ಹಾಜರುಪಡಿಸಿದ್ದನ್ನು ನಮ್ಮ ಸಮಕ್ಷಮ ನಿಪಿ-18 ರಂತೆ ಅಮಾನತ್ತು ಪಂಚನಾಮೆ ಮಾಡಿ ಮು.ಮಾ.14 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ನಿಪಿ-18 ನ್ನು ಓದಿ ಅದಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡು ಸದರಿ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-18 ಪಂಚನಾಮೆಯಲ್ಲಿ ಬರೆದಿದ್ದ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ. ಕೆಕೆಎಸ್. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

<u>ಪಾಟೀ ಸವಾಲುಃ **5** ರಿಂದ **7** ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

**5** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **15**
ಸಿಡಬ್ಲೂ **19**

| | | |
|---|---|---|
| ಸಾಕ್ಷಿ ಹೆಸರು | – | ವೀರಭದ್ರಪ್ಪ |
| ತಂದೆ ಹೆಸರು | – | ಕೆಂಡಪ್ಪ |
| ವಯಸ್ಸು | – | **65** ವರ್ಷ |
| ಉದ್ಯೋಗ | – | ವ್ಯವಸಾಯ |
| ವಿಳಾಸಃ | – | ಕಪ್ಪಗಳಲೆ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **30–07–2018.**
ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಃ **18** ರವರ ಪರಿಚಯವಿಲ್ಲ. ನನಗೆ ಆರೋಪಿ ನಂಃ **5** ಮಹದೇವ ಮತ್ತು ಆರೋಪಿ ನಂಃ **6** ಶಿವು ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಃ **5** ನಿಂದ ಮು.ಮಾ.**15** ವಶಪಡಿಸಿಕೊಂಡಿದ್ದು ನನಗೆ ಗೊತ್ತಿಲ್ಲ. ಸುಮಾರು ಒಂದುವರೆ ವರ್ಷದ ಕೆಳಗೆ ಪೋಲಿಸರು ಜೀಪಿನಲ್ಲಿ ಸೊರಬದಿಂದ ಶಿರಾಳಕೊಪ್ಪ ರಸ್ತೆಯಲ್ಲಿರುವ ಒಂದು ಒಣಗಿದ ಕೆರೆಯ ಬಳಿ ಕರೆದುಕೊಂಡು ಹೋದರು. ಈಗ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇದ್ದು ಅದನ್ನು ಗುರುತಿಸುತ್ತೇನೆ. ಸದರಿ ದಾಖಲಾತಿ ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ–**19** ಎಂದು ಗುರುತಿಸಲಾಯಿತು. ನಿಪಿ–**19** ಅ ನನ್ನ ಸಹಿ. ಸದರಿ ಸಹಿಯನ್ನು ಎಲ್ಲಿ ಮಾಡಿದ್ದೇನೆ ಎಂದು ನನಗೆ ಈಗ ನೆನಪಿಲ್ಲ. ನಿಪಿ–**19** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ–**19** ರಡಿ ಮು.ಮಾ. **15** ನ್ನು ವಶಪಡಿಸಿಕೊಂಡಿರುವುದು ನನಗೆ ಗೊತ್ತಿಲ್ಲ.

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಃ **6** ನಿಂದ ಮು.ಮಾ.**16** ವಶಪಡಿಸಿಕೊಂಡಿದ್ದು ನನಗೆ ಗೊತ್ತಿಲ್ಲ. ಈಗ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇದ್ದು ಅದನ್ನು ಗುರುತಿಸುತ್ತೇನೆ. ಸದರಿ ದಾಖಲಾತಿ ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ–**20** ಎಂದು

ಗುರುತಿಸಲಾಯಿತು. ನಿಪಿ–20 ಅ ನನ್ನ ಸಹಿ. ಸದರಿ ಸಹಿಯನ್ನು ಎಲ್ಲಿ ಮಾಡಿದ್ದೇನೆ ಎಂದು ನನಗೆ ಈಗ ನೆನಪಿಲ್ಲ. ನಿಪಿ–20 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿಃ 29-03-2016 ರಂದು ನಾನು ಮತ್ತು ಚಾಸಃ 18 ರವರು ಸೊರಬ ಸಿಪಿಐ. ಕಛೇರಿಗೆ ಹೋಗಿದ್ದೆವು, ಆ ಸಮಯದಲ್ಲಿ ಆರೋಪಿ ನಂಃ 5 ಪ್ರಕರಣದಲ್ಲಿ ಕೃತ್ಯಕ್ಕೆ ಬಳಸಿದ ರಾಡನ್ನು ಮು.ಮಾ.15 ನ್ನು ಚತ್ರದಹಳ್ಳಿಯ ಕೆರೆಯ ಬಳಿ ಇಟ್ಟಿದ್ದೇನೆ ಎಂದು ತಿಳಿಸಿದ್ದರ ಮೇರೆಗೆ ನಾನು ಮತ್ತು ಚಾಸಃ 27 ಮತ್ತು 18 ರ ಸಮಕ್ಷಮ ಛತ್ರದ ಹಳ್ಳಿಯ ಕೆರೆಯ ಪಶ್ಚಿಮ ದಿಕ್ಕಿನಲ್ಲಿರುವ ಬೆಂಡಿನ ಪೊದೆಯ ಬಳಿ ಹೋಗಿದ್ದು ನಮ್ಮ ಸಮಕ್ಷಮ ಆರೋಪಿ ನಂಃ 5 ಮು.ಮಾ.15 ತೆಗೆದು ಹಾಜರುಪಡಿಸಿದ್ದನ್ನು ನಮ್ಮ ಸಮಕ್ಷಮ ನಿಪಿ-19 ರಂತೆ ಅಮಾನತ್ತು ಪಂಚನಾಮೆ ಮಾಡಿ ಮು.ಮಾ.15 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ನಿಪಿ-19 ನ್ನು ಓದಿ ಅದಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡು ಸದರಿ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಆರೋಪಿ ನಂಃ 6 ಪ್ರಕರಣದಲ್ಲಿ ಕೃತ್ಯಕ್ಕೆ ಬಳಸಿದ ರಾಡನ್ನು ಮು.ಮಾ.16 ನ್ನು ಚತ್ರದಹಳ್ಳಿಯ ಕೆರೆಯ ಬಳಿ ಇಟ್ಟಿದ್ದೇನೆ ಎಂದು ತಿಳಿಸಿದ್ದರ ಮೇರೆಗೆ ನಾನು ಮತ್ತು ಚಾಸಃ 27 ಮತ್ತು 18 ರ ಸಮಕ್ಷಮ ಛತ್ರದ ಹಳ್ಳಿಯ ಕೆರೆಯ ದಕ್ಷಿಣ ದಿಕ್ಕಿನಲ್ಲಿರುವ ಬೆಂಡಿನ ಪೊದೆಯ ಬಳಿ ಹೋಗಿದ್ದು ನಮ್ಮ ಸಮಕ್ಷಮ ಆರೋಪಿ ನಂಃ 6 ಮು.ಮಾ.16 ತೆಗೆದು ಹಾಜರುಪಡಿಸಿದ್ದನ್ನು ನಮ್ಮ ಸಮಕ್ಷಮ ನಿಪಿ-20 ರಂತೆ ಅಮಾನತ್ತು ಪಂಚನಾಮೆ ಮಾಡಿ ಮು.ಮಾ.16 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ನಿಪಿ-20 ನ್ನು ಓದಿ ಅದಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡು ಸದರಿ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-19 ಮತ್ತು 20 ಪಂಚನಾಮೆಯಲ್ಲಿ ಬರೆದಿದ್ದ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ರಿಂದ 4 ನೇ ಆರೋಪಿ ಪರ ಶ್ರೀ. ಕೆಕೆಎಸ್. ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಪಾಟೀ ಸವಾಲುಃ 5 ರಿಂದ 7 ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)